

## ಮರಳಿ ಬಂದ ಮೂರ್ತಿ

ಇನ್‌ಫೋಸಿಸ್ ಟೆಕ್ನಾಲಜೀಸ್‌ನ ಎಕ್ಸಿಕ್ಯೂಟಿವ್ ಚೇರ್‌ಮನ್ ಮತ್ತು ಹೆಚ್ಚುವರಿ ನಿರ್ದೇಶಕರಾಗಿ ಎನ್.ಆರ್. (ನಾಗವಾರ ರಾಮರಾವ್) ನಾರಾಯಣಮೂರ್ತಿ ಮರಳಿ ಬಂದಿದ್ದಾರೆ. ಸದ್ಯದ ಮಾರುಕಟ್ಟೆ ಸ್ಪರ್ಧೆಯಲ್ಲಿ ಇನ್ಫಿಗೆ ಮತ್ತೆ ಮೂರ್ತಿಯವರ ಸೇವೆಯ ಅಗತ್ಯವಿದೆ ಎಂದು ಆಡಳಿತ ಮಂಡಳಿಗೆ ಅನ್ನಿಸಿದ್ದು ಸಹಜವೇ. ಇನ್‌ಫೋಸಿಸ್ ಚೇರ್‌ಮನ್ ಆಗಿದ್ದು ತಮ್ಮ 65ನೇ ವಯಸ್ಸಿನಲ್ಲಿ ಸ್ವ ಇಚ್ಛೆಯಿಂದ ನಿವೃತ್ತರಾದವರು ಮೂರ್ತಿ. 'ಇನ್ಫಿಯಲ್ಲೀಗ ಏನು ನಡೆಯುತ್ತಿದೆ ಎನ್ನುವುದು ವಿವರವಾಗಿ ನನಗೆ ಗೊತ್ತಿಲ್ಲ. ಸಂಸ್ಥೆಯಲ್ಲಿ ಸಾಕಷ್ಟು ಯುವ ನಾಯಕರಿದ್ದಾರೆ. ಅವರ ಜತೆಗೆ ಕುಳಿತು ಮಾತನಾಡಿದ ಬಳಿಕ ಏನು ಮಾಡಬೇಕೆಂಬುದು ಸ್ಪಷ್ಟವಾಗಬಹುದು' ಎಂದು ಹೊಸ ಅಧಿಕಾರ ವಹಿಸಿಕೊಂಡ ಬಳಿಕ ಮೂರ್ತಿಯವರು ಹೇಳಿದ್ದಾರೆ.

ಹಾಗೆಂದು ನಿವೃತ್ತರಾದ ಬಳಿಕ ಮೂರ್ತಿಯವರು ಸುಮ್ಮನೇ ಕುಳಿತವರೇನೂ ಅಲ್ಲ. ಐಟಿ ಉದ್ಯಮದಲ್ಲಿ ಬಂಡವಾಳ ತೊಡಗಿಸುವ ಸ್ವಂತ ಸಂಸ್ಥೆಯೊಂದರ ಜವಾಬ್ದಾರಿ ಮಾತ್ರವಲ್ಲದೆ, ಎಚ್‌ಎಸ್‌ಬಿಸಿ ಬ್ಯಾಂಕ್‌ನ ಸ್ವತಂತ್ರ ನಿರ್ದೇಶಕರಾಗಿ ಕೆಲಸ ಮಾಡುತ್ತಿದ್ದಾರೆ. ಐಸಿಐಸಿಐ ಬ್ಯಾಂಕ್, ಎನ್‌ಡಿಟಿವಿ, ಡಿಬಿಎಸ್ ಬ್ಯಾಂಕ್, ಯುನಿಲೀವರ್ ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ನಿರ್ದೇಶಕರಾಗಿ ಕೆಲಸ ಮಾಡಿದ್ದ ಅವರು, ಕಾರ್ನೆಲ್ ವಿ.ವಿ, ಫೋರ್ಡ್ ಫೌಂಡೇಶನ್, ಯುಎನ್ ಫೌಂಡೇಶನ್‌ಗಳ ಸಲಹೆಗಾರರೂ ಆಗಿದ್ದರು.

ಮೈಸೂರಿನ ಎನ್‌ಐಇ ನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಮುಗಿಸಿ, ಕಾನ್ಪುರದ ಐಐಟಿಯಲ್ಲಿ ಎಂಟೆಕ್ ಮಾಡಿದ ಬಳಿಕ ಒಂದೆರಡು ಸಂಸ್ಥೆಗಳಲ್ಲಿ ಕೆಲಸ ಮಾಡಿದ ಮೂರ್ತಿ 1981ರಲ್ಲಿ ಗೆಳೆಯರ ಜತೆ ಸೇರಿ ಇನ್‌ಫೋಸಿಸ್ ಸ್ಥಾಪಿಸಿದಾಗ ಮುಂದೊಂದು ದಿನ ಅದು ದೈತ್ಯ ಸಂಸ್ಥೆಯಾಗಿ ಬೆಳೆಯುತ್ತದೆ ಎಂದು ಯಾರೂ ಅಂದುಕೊಂಡಿರಲಿಲ್ಲ. ಇನ್‌ಫೋಸಿಸ್ ಬೆಳೆದಂತೆಯೇ ಮೂರ್ತಿಯವರ ಇಮೇಜ್ ಕೂಡಾ ಬೆಳೆಯಿತು. ಲಕ್ಷಾಂತರ ಯುವಜನರಿಗೆ ಉದ್ಯೋಗ ಒದಗಿಸಿದ ಇನ್ಫಿ, ಇತರ ಐಟಿ ಸಂಸ್ಥೆಗಳಿಗೂ ಸ್ಫೂರ್ತಿ ನೀಡಿತು. 1981ರಿಂದ 2002ರವರೆಗೆ ಇನ್ಫೋಸಿಸ್ ಸಿಇಒ ಆಗಿದ್ದ ಅವರು, 2002ರಿಂದ ಸಂಸ್ಥೆಯ ಚೇರ್‌ಮನ್ ಆದ ಬಳಿಕ ಇನ್ಫಿಯ ಕೀರ್ತಿ ಜಗತ್ತಿನಾದ್ಯಂತ ಬೆಳೆಯಿತು. ಮೂರ್ತಿ ನಿವೃತ್ತಿಯ ಬಳಿಕ ಸಿಇಒ ಮತ್ತು ಸಿಓಓ ಎಂಬ ಎರಡೂ ಹುದ್ದೆಗಳನ್ನು ಮುಂದುವರಿಸಿದ ಇನ್‌ಫೋಸಿಸ್ ಆಡಳಿತ ಮಂಡಳಿ, 2011ರಿಂದ ಕೇವಲ ಸಿಇಒ ಹುದ್ದೆಯನ್ನು ಮಾತ್ರ ಉಳಿಸಿಕೊಂಡಿತು. ಅದೇ ಸಂಸ್ಥೆಯೊಳಗಿನ ಆಡಳಿತ ನಿರ್ವಹಣೆಯ ವೇಗವನ್ನು ಕುಂಠಿತಗೊಳಿಸಿದೆ ಎಂಬ ವಾದವಿದೆ.

ಅದೇನೇ ಇದ್ದರೂ ಮೂರ್ತಿಯವರು ಮರಳಿ ಬಂದಿರುವುದು ಇನ್ಫಿಯಲ್ಲಿ ಹೊಸ ಹುಮ್ಮಸ್ಸು ಉಕ್ಕಿಸಿದೆ. ಮಗ ರೋಹನ್‌ನನ್ನೂ ತಮ್ಮ ಸಹಾಯಕರಾಗಿ ನೇಮಿಸಿಕೊಂಡಿರುವುದು ಮೂರ್ತಿಯವರಿಗೆ ಸಂಸ್ಥೆಯ ಮೇಲಿದ್ದ ಮೋಹ ಹಿಂಗಿಲ್ಲ ಎನ್ನುವುದರ ಸೂಚನೆಯೇ ಇರಬೇಕು. ನಿರ್ದೇಶಕರ ನಿವೃತ್ತಿ ವಯಸ್ಸನ್ನು 70ಕ್ಕೆ ಏರಿಸುವ ಮೂಲಕ ಇನ್‌ಫೋಸಿಸ್ ಆಡಳಿತ ಮಂಡಳಿಯು ಮುಂದಿನ ಐದು ವರ್ಷಗಳ ಕಾಲ ಮೂರ್ತಿಯವರ ಅನುಭವ ಮತ್ತು ಇಮೇಜನ್ನು ಪೂರ್ತಿಯಾಗಿ ಬಳಸಿಕೊಳ್ಳುವ ಯತ್ನದಲ್ಲಿದೆ.

## ಕುಂದ್ರಾ ಜೂಜಾಟ

ಐಪಿಎಲ್ ಕ್ರಿಕೆಟ್‌ನ ಸ್ಪಾಟ್ ಫಿಕ್ಸಿಂಗ್ ಹಗರಣ ತನ್ನೆಲ್ಲ ಕುರೂಪಿ ಮುಖಗಳನ್ನು ಒಂದೊಂದಾಗಿ ಪ್ರದರ್ಶಿಸುತ್ತಿದೆ. ರಾಜಸ್ಥಾನ್ ರಾಯಲ್ಸ್ ತಂಡದ ಮಾಲೀಕನೇ ಆಗಿರುವ ರಾಜ್ ಕುಂದ್ರಾ ಕೂಡಾ ಈ ಅಕ್ರಮ ಬೆಟಿಂಗ್‌ನಲ್ಲಿ ಪಾಲ್ಗೊಂಡಿದ್ದಾನಂತೆ. ಪೊಲೀಸ್ ತನಿಖೆಯ ವೇಳೆ ಕುಂದ್ರಾ ಹಾಗೆಂದು ಒಪ್ಪಿಕೊಂಡಿದ್ದಾನಂತೆ.

ರಾಜ್ ಕುಂದ್ರಾನ ತಂದೆ ಪಂಜಾಬಿನಿಂದ ವಲಸೆ ಹೋಗಿ, ಲಂಡನ್ ಕಾಟನ್ ಫ್ಯಾಕ್ಟರಿಯಲ್ಲಿ ನೌಕರನಾಗಿದ್ದವರು. 18ರ ಹರೆಯದಲ್ಲಿ ಕಾಲೇಜ್ ಡ್ರಾಪೌಟ್ ಆದ ರಾಜ್, ಬಳಿಕ ನೇಪಾಳಕ್ಕೆ ಬಂದು ಚಿನ್ನದ ಗಣಿಗಾರಿಕೆಯಲ್ಲಿ ತೊಡಗಿದ. ಪಾಶ್ಮಿನಾ ಶಾಲುಗಳನ್ನು ಲಂಡನ್ನಿನ ಫ್ಯಾಷನ್ ಹೌಸ್‌ಗಳಿಗೆ ಮಾರಾಟ ಮಾಡಿದ. ದುಬೈನಲ್ಲಿ ಡೈಮಂಡ್ ವ್ಯಾಪಾರ ಆರಂಭಿಸಿದ. ಕೇವಲ 11 ವರ್ಷಗಳಲ್ಲಿ ಬ್ರಿಟಿಷ್ ಏಷ್ಯನ್ನರಲ್ಲಿ 198ನೇ ಅತಿ ದೊಡ್ಡ ಶ್ರೀಮಂತನಾಗಿ ಬೆಳೆದ. ಜತೆಗೆ ಬಾಲಿವುಡ್ ಸಿನಿಮಾಗಳಲ್ಲೂ ಹಣ ತೊಡಗಿಸಿದ.



ರಾಜ್ ಮೊದಲ ಪತ್ನಿ ಕವಿತಾ ಕುಂದ್ರಾ. ಆಕೆ ಹೆಣ್ಣು ಮಗುವಿಗೆ ಜನ್ಮ ನೀಡಿದ ಮೊದಲ ವಾರದಲ್ಲೇ ರಾಜ್ ಡೈವೋರ್ಸ್ ಕೊಟ್ಟ. ಅದಕ್ಕೆ ಶಿಲ್ಪಾ ಶೆಟ್ಟಿಯೇ ಕಾರಣ ಎನ್ನುವುದು ಕವಿತಾ ಆರೋಪ. ಅದನ್ನು ಲೆಕ್ಕಿಸದೆ ಶಿಲ್ಪಾಳನ್ನು ಮದುವೆಯಾದ ರಾಜ್, ರಾಜಸ್ಥಾನ ರಾಯಲ್ ಒಡೆಯನಾದ ಬಳಿಕ ಸದಾ ಸುದ್ದಿಯಲ್ಲಿದ್ದಾತ. 'ರಾಜಸ್ಥಾನ್ ರಾಯಲ್ಸ್ ತಂಡದಲ್ಲಿ ರಾಜ್ ಕೇವಲ 13% ಹಣ ಹೂಡಿದ್ದಾನೆ ಅಷ್ಟೇ' ಎಂದೀಗ ತಂಡದ ಸಹಮಾಲೀಕರು ಸ್ಪಷ್ಟನೆ ಕೊಟ್ಟಿದ್ದಾರೆ. ಐಪಿಎಲ್‌ನಿಂದ ತಂಡ ಉಚ್ಚಾಟನೆ ಆಗುವುದನ್ನು ಅದು ತಡೆಯಬಹುದು. ಆದರೆ ಆರೋಪ ಸಾಬೀತಾದರೆ ರಾಜ್ ಜೈಲಿಗೆ ಹೋಗುವುದನ್ನು ಯಾರೂ ತಡೆಯಲಾಗದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65